**ದಿನಾಂಕ: ೦೫/೦1/2೦19 ರಂದು ಹಗದೂರು ವಾರ್ಡ್ ಸಂಖ್ಯೆ: 84ರ ವಾರ್ಡ್ ಕಮಿಟಿಯು ಮಾನ್ಯ ಪಾಲಿಕೆ ಸದಸ್ಯರಾದ ಶ್ರೀ.ಎಸ್.ಉದಯ್ ಕುಮಾರ್ ರವರ ಅಧ್ಯಕ್ಷತೆಯಲ್ಲಿ ನಡೆದಿರುವ ಸಭೆಯ ನಡವಳಿಗಳು:-**

**<u>ಹಾಜರಿದ್ದ ಅಧಿಕಾರಿ ಹಾಗೂ ಸಿಬ್ಬಂದಿಗಳು</u>**

1) ಸಹಾಯಕ ಅಭಿಯಂತರರು, ಹಗದೂರು ವಾರ್ಡ್ ನಂ.84
2) ಸಹಾಯಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ವಿಭಾಗ
3) ಸಹಾಯಕ ಅಭಿಯಂತರರು, ಬೆಸ್ಕಾಂ,
4) ಹಿರಿಯ ಆರೋಗ್ಯ ನಿರೀಕ್ಷಕರು, ಹಗದೂರು ವಾರ್ಡ್ ನಂ.84
5) ರಾಜಸ್ವ ನಿರೀಕ್ಷಕರು, ಕಂದಾಯ ಶಾಖೆ, ಬಿಬಿಎಂಪಿ, ಹಗದೂರು ವಾರ್ಡ್ ನಂ.84
6) ಹಗದೂರು ವಾರ್ಡ್ ಕಮಿಟಿ ಸದಸ್ಯರು ಮತ್ತು ಸಾರ್ವಜನಿಕರು

**ಸಭೆಯು ಬೆಳಗ್ಗೆ 11:3೦ ಘಂಟೆಗೆ ಪ್ರಾರಂಭವಾಗಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.**

1. **ಅಧ್ಯಕ್ಷರ ಅಪ್ಪಣೆ ಮೇರೆಗೆ ಸಭೆಯಲ್ಲಿ ಹಾಜರಿದ್ದ, ಅಧ್ಯಕ್ಷರು, ಹಾಗೂ ಎಲ್ಲಾ ಮಾನ್ಯ ವಾರ್ಡ್ ಸಮಿತಿ ಸದಸ್ಯರನ್ನು, ಅಧಿಕಾರಿಗಳನ್ನು, ಸಾರ್ವಜನಿಕರನ್ನು ಸಿ.ನಾರಾಯಣಸ್ವಾಮಿ, ಸ.ಅ ರವರು ಸಭೆಗೆ ಸ್ವಾಗತಿಸಿದರು,**

2. ದಿನಾಂಕ: 10/12/2018 ರ ಹಿಂದಿನ ಸಭೆಯ ನಡುವಳಿಯಂತೆ ಚರ್ಚಿಸಿದ ವಿಷಯಗಳ ಮೇಲೆ ತೆಗೆದುಕೊಂಡ ಕ್ರಮಗಳನ್ನು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ವಿಷಯವಾರು ಚರ್ಚಿಸಿ, ತೆಗೆದುಕೊಂಡ ಕ್ರಮಗಳ ಬಗ್ಗೆ ಸಭೆಯಲ್ಲಿ ಕೂಲಂಕುಷವಾಗಿ ಪರಿಶೀಲಿಸಲಾಯಿತು.

3. ನಲ್ಲೂರಹಳ್ಳಿಯಿಂದ ಸಿದ್ದಾಪುರ ರಸ್ತೆಯಲ್ಲಿ ವಾಹನ ನಡೆಸಲು ಬಹಳ ಕಷ್ಟವಾಗಿದ್ದು, ಕಾಮಗಾರಿಯನ್ನು ಪ್ರಾರಂಭಿಸಿ ತಕ್ಷಣ ನಿಲ್ಲಿಸಲಾಗಿದೆ ಎಂದು ಹಾಜರಿದ್ದ ಸುಮಾರು ಜನ ಸಭೆಯಲ್ಲಿ ದೂರು ನೀಡಲಾಗಿ ಇದರ ಬಗ್ಗೆ ಕುಲಂಕುಷವಾಗಿ ಮಾನ್ಯ ಅಧ್ಯಕ್ಷರು ಚರ್ಚಿಸಿ ಗುತ್ತಿಗೆದಾರರ ತೊಂದರೆಯಿಂದ ಈ ರೀತಿ ಆಗಿದೆ ತಕ್ಷಣ ಸರಿಪಡಿಸಲಾಗುವುದು ಎಂದು ತಿಳಿಸಿ ಸೋಮವಾರ ದಿನಾಂಕ: ೦7/೦1/2019 ರಂದು ನಲ್ಲೂರಹಳ್ಳಿ ರಸ್ತೆಯನ್ನು ಪರಿವೀಕ್ಷಣೆ ಮಾಡಿ, ಸಂಬಂಧಪಟ್ಟ ಅಧಿಕಾರಿಗಳನ್ನು ಅಲ್ಲಿಗೆ ಕರೆಸಿ ತಕ್ಷಣ ರಸ್ತೆ ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

   <u>ಕ್ರಮ:</u> ಸಹಾಯಕ ಕಾರ್ಯಪಾಲಕ ಅಭಿಯಂತರರು, ರ.ಮೂ.ಸೌ

4. ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ವಾರ್ಡ್ ವ್ಯಾಪ್ತಿಯಲ್ಲಿ ಪೈಪ್‌ಲೈನ್‌ನ್ನು ಅಳವಡಿಸುತ್ತಿದ್ದು, ಕೆಲವು ಬಡಾವಣೆಗಳಲ್ಲಿ ರಸ್ತೆಗಳನ್ನು ಕೈಬಿಟ್ಟಿದ್ದು, ಆ ರಸ್ತೆಗಳಲ್ಲಿ ಕಾವೇರಿ ಪೈಪ್‌ಲೈನ್‌ಗಳನ್ನು ಅಳವಡಿಸಬೇಕೆಂದು ಹಿಂದಿನ ಸಭೆಯಲ್ಲಿಯೇ ತಿರ್ಮಾನಿಸಲಾಯಿತು. ಕ್ರಮ ತೆಗೆದುಕೊಂಡಿರುವುದಿಲ್ಲವೆಂದು ಸಭೆಯಲ್ಲಿ ತಿಳಿಸಲಾಗಿ, ತುರ್ತಾಗಿ ಇದರ ಬಗ್ಗೆ ಕ್ರಮ ವಹಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಯಿತು.

   <u>ಕ್ರಮ:</u> ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ

5. ಸಿದ್ದಾಪುರ ಗ್ರಾಮದ ಸೆಲ್ ಪೆಟ್ರೋಲ್ ಬಂಕ್ ಅಂದರೆ ನಲ್ಲೂರಹಳ್ಳಿ ರಸ್ತೆ ತಿರುವಿನಲ್ಲಿ ಬರುವ ಗುಜರಿ (scrap) ಅಂಗಡಿಯವರು ರಸ್ತೆಯನ್ನು ಒತ್ತುವರಿ ಮಾಡಿ ವಾಹನ ಸಂಚಾರಕ್ಕೆ ತೊಂದರೆ ಉಂಟು ಮಾಡುತ್ತಿರುವ ಬಗ್ಗೆ ಸೂಕ್ತ ಕ್ರಮ ವಹಿಸಲು ಸಭೆಯಲ್ಲಿ ಕೋರಲಾಗಿತ್ತು.

   <u>ಕ್ರಮ:</u> ಹಿರಿಯ ಆರೋಗ್ಯ ನಿರೀಕ್ಷಕರು, ವಾರ್ಡ್ ನಂ.84

6. ನಾಗೊಂಡನಹಳ್ಳಿ ಮತ್ತು ವಿಜಯನಗರ ಮುಖ್ಯರಸ್ತೆಯ ಕಾಮಗಾರಿಯನ್ನು ಮುಂದುವರಿಸದೆ ಸ್ಥಗಿತಗೊಳಿಸುತ್ತಿದ್ದು, ತುರ್ತಾಗಿ ಮುಗಿಸಲು ಸಭೆಯಲ್ಲಿ ಒತ್ತಾಯಿಸಲಾಯಿತು.

<u>ಕ್ರಮ:</u> ಸಹಾಯಕ ಕಾರ್ಯಪಾಲಕ ಅಭಿಯಂತರರು, ರ.ಮೂ.ಸೌ

7. ಬೆಸ್ಕಾಂ ಇಲಾಖಾ ಸಮಸ್ಯೆಗಳನ್ನು ಚರ್ಚಿಸಲಾಗಿ, ಹಾಜರಿದ್ದ ಸಹಾಯಕ ಅಭಿಯಂತರರು ನಿರ್ಧಿಷ್ಠ ದೂರುಗಳನ್ನು ನಮ್ಮ ಇಲಾಖೆಗೆ ನೀಡಿದ್ದಲ್ಲಿ ಎಲ್ಲಾ ಸಮಸ್ಯೆಗಳನ್ನು ಹಂತ ಹಂತವಾಗಿ ಪರಿಹರಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

<u>ಕ್ರಮ:</u> ಸಹಾಯಕ ಅಭಿಯಂತರರು, ಬೆಸ್ಕಾಂ

8. ವಾರ್ಡ್ ವ್ಯಾಪ್ತಿಯಲ್ಲಿ ಕೆಲವು ರಸ್ತೆಗಳಲ್ಲಿ, ಬಡಾವಣೆಗಳಲ್ಲಿ Street Lights ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ, ಹೊಸದಾಗಿ ಹಾಕಿರುವ ಬೀದಿ ದೀಪಗಳನ್ನು ಯಾರು ನಿರ್ವಹಣೆ ಮಾಡುತ್ತಿಲ್ಲ. ಇದರ ಬಗ್ಗೆ ತುರ್ತು ಕ್ರಮವಹಿಸಲು ಬಿ.ಬಿ.ಎಂ.ಪಿ ವಿದ್ಯುತ್ ವಿಭಾಗ, ಇಂಜಿನಿಯರ್‌ಗೆ ಸೂಚಿಸಲು ಸಭೆಯಲ್ಲಿ ವಾರ್ಡ್ ಅಭಿಯಂತರರನ್ನು ಕೋರಲಾಯಿತು.

<u>ಕ್ರಮ:</u> ವಾರ್ಡ್ ಅಭಿಯಂತರರು

9. ವಾರ್ಡ್ ವ್ಯಾಪ್ತಿಯ ಕಸದ ಗಾಡಿಗಳು ಸಮಯಕ್ಕೆ ಸರಿಯಾಗಿ ಬರದ ಕಾರಣ ರಸ್ತೆಯ ಪಕ್ಕದಲ್ಲಿ ಕಸದ ರಾಶಿಗಳು ಶೇಖರಣೆಯಾಗುತ್ತಿರುವುದನ್ನು ತಪ್ಪಿಸಲು ಸಭೆಯಲ್ಲಿ ತಿಳಿಸಲಾಯಿತು. ಇದರ ಬಗ್ಗೆ ಸೂಕ್ತ ಕ್ರಮಕ್ಕಾಗಿ ಸಭೆಯಲ್ಲಿ ಹಾಜರಿದ್ದ ಹಿರಿಯ ಆರೋಗ್ಯ ನಿರೀಕ್ಷಕರಿಗೆ ಸೂಚಿಸಲಾಯಿತು.

<u>ಕ್ರಮ:</u> ಹಿರಿಯ ಆರೋಗ್ಯ ನಿರೀಕ್ಷಕರು, ವಾರ್ಡ್ ನಂ.೮೪

10. ಭಾಗೀರತಿ ನಾರಾಯಣರಾವ್ ಎಂಬುವವರು ಹಗದೂರು – ವೈಟ್‌ಫೀಲ್ಡ್ ರಸ್ತೆಯ ಪಕ್ಕದಲ್ಲಿ ಬರುವ ಜಾಗದಲ್ಲಿ ಕಟ್ಟಡ ನಿರ್ಮಾಣ ಮಾಡುತ್ತಿದ್ದು, ಈ ಸ್ಥಳವು ಸರ್ಕಾರಿ ಜಾಗವಾಗಿರುತ್ತದೆ ಎಂದು ಕೆಲವರು ಸಭೆಯಲ್ಲಿ ತಿಳಿಸಲಾಗಿದೆ. ಇದರ ಬಗ್ಗೆ ಸಹಾಯಕ ಕಂದಾಯ ಅಧಿಕಾರಿಗಳಿಗೆ ದಾಖಲಾತಿಗಳ ಪರಿಶೀಲನೆಯ ಬಗ್ಗೆ ಪತ್ರ ಬರೆಯಲು ಸಭೆಯಲ್ಲಿ ತಿರ್ಮಾನಿಸಲಾಯಿತು.

<u>ಕ್ರಮ:</u> ಸಹಾಯಕ ಕಂದಾಯ ಅಧಿಕಾರಿ, ವೈಟ್‌ಫೀಲ್ಡ್ ಉಪವಲಯ

11. ವಾರ್ಡ್ ವ್ಯಾಪ್ತಿಯ ಡಿ.ಎನ್.ಎ ಅಪಾರ್ಟ್‌ಮೆಂಟ್‌ನ ನಿವಾಸಿಗಳು ಸಭೆಯಲ್ಲಿ ಖಾತಾ ವಿಷಯದ ಬಗ್ಗೆ ದೂರು ನೀಡಲಾಗಿ, ಕಂದಾಯ ಶಾಖೆಗೆ ಸೇರಿದ ಅಧಿಕಾರಿಗಳು ಸದರಿ ಅಪಾರ್ಟ್‌ಮೆಂಟ್‌ನ ನಿವಾಸಿಗಳಿಗೆ ಖಾತಾ ನೀಡುತ್ತಿಲ್ಲವೆಂದು ತಿಳಿಸಲಾಗಿ, ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ರಾಜಸ್ವ ನಿರೀಕ್ಷಕರಿಗೆ ಇದರ ಬಗ್ಗೆ ಸಮಸ್ಯೆ ಸರಿಪಡಿಸಲು ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

<u>ಕ್ರಮ:</u> ಸಹಾಯಕ ಕಂದಾಯ ಅಧಿಕಾರಿ, ವೈಟ್‌ಫೀಲ್ಡ್ ಉಪವಲಯ

12. ವಾರ್ಡ್ ವ್ಯಾಪ್ತಿಯಲ್ಲಿ ಬರುವ ಶುದ್ಧ ಕುಡಿಯುವ ನೀರಿನ ಘಟಕಗಳ ನೀರನ್ನು ಪ್ರತಿ ೦೩ ತಿಂಗಳಿಗೊಮ್ಮೆ ಪರೀಕ್ಷೆಗೆ ಒಳಪಡಿಸಬೇಕು ಎಂದು ಸಭೆಯಲ್ಲಿ ಹಾಜರಿದ್ದ ಶ್ರೀಮತಿ ಅನುಪಮ ರವರು ಸೂಚಿಸಿರುತ್ತಾರೆ. ಅದರಂತೆ, ಕ್ರಮ ಕೈಗೊಳ್ಳಲು ವಾರ್ಡ್ ಅಭಿಯಂತರರಿಗೆ ಸೂಚಿಸಲಾಯಿತು.

<u>ಕ್ರಮ:</u> ವಾರ್ಡ್ ಅಭಿಯಂತರರು

ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಚರ್ಚಿಸಿದಂತಾ ಎಲ್ಲಾ ವಿಷಯಗಳ ಬಗ್ಗೆ ತುರ್ತು ಕ್ರಮ ವಹಿಸಲು ಹಾಜರಿದ್ದ ಅಧಿಕಾರಿಗಳಿಗೆ ಆದೇಶಿಸಿದರು. ಸಾರ್ವಜನಿಕರ ಸಮಸ್ಯೆಗಳನ್ನು ಬಗೆಹರಿಸಲಾಗುವುದು ಮತ್ತು ಕಾಮಗಾರಿಗಳನ್ನು ಈಗಾಗಲೇ ವಾರ್ಡ್ ವ್ಯಾಪ್ತಿಯಲ್ಲಿ ಪ್ರಾರಂಭಿಸಲಾಗಿದೆ, ಎಂದು ಸಭೆಯಲ್ಲಿ ತಿಳಿಸಿ, ಸಭೆಯಲ್ಲಿ ಇದ್ದ ಎಲ್ಲಾ ಸದಸ್ಯರಿಗೂ, ಸಾರ್ವಜನಿಕರಿಗೆ ಅಭಿನಂದಿಸಿದರು

ಮಾನ್ಯ ಅಧ್ಯಕ್ಷರ ಅಪ್ಪಣೆಯ ಮೇರೆಗೆ ಸಭೆಗೆ ಹಾಜರಿದ್ದ ಎಲ್ಲರಿಗೂ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| ಸಹಿ/- | ಸಹಿ/- |
| ಅಧ್ಯಕ್ಷರು | ಕಾರ್ಯದರ್ಶಿ ಮತ್ತು ಸಂಚಾಲಕರು |
| ಶ್ರೀ. ಎಸ್.ಉದಯ್ ಕುಮಾರ್ | ಸಿ.ನಾರಾಯಣಸ್ವಾಮಿ |
| ಪಾಲಿಕೆ ಸದಸ್ಯರು, ವಾರ್ಡ್ ನಂ: ೮೪ | ಸ.ಅ ವಾರ್ಡ್ ನಂ: ೮೪ |

**ಪ್ರತಿಯನ್ನು:**

1) ಮಾನ್ಯ ಜಂಟಿ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಮಹದೇವಪುರ ವಲಯ
2) ಮುಖ್ಯ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಮಹದೇವಪುರ ವಲಯ
3) ಕೌನ್ಸಿಲ್ ಕಾರ್ಯದರ್ಶಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
4) ಎಲ್ಲಾ ಅಧಿಕಾರಿ ಸಿಬ್ಬಂದಿಗಳಿಗೆ ಕ್ರಮಕ್ಕಾಗಿ
5) ಎಲ್ಲಾ ವಾರ್ಡ್ ಕಮಿಟಿ ಸದಸ್ಯರುಗಳ ಮಾಹಿತಿಗಾಗಿ
6) ಕಛೇರಿ ಪ್ರತಿ.